ಒಮ್ಮೆ ಮನೆಯಿಂದ ವಿಶ್ವವಿದ್ಯಾಲಯಕ್ಕೆ ಹೋಗುತ್ತಿದ್ದೆ. ನಡುವೆ ಗಾಳೆಮ್ಮನಗುಡಿ ಸಿಗುತ್ತದೆ. ಆದಿನ ಅಮ್ಮನ ಜಾತ್ರೆಯ ದೆಸೆಯಿಂದ ಟ್ರಾಫಿಕ್ ಜಾಮಾಗಿ, ಕಾರನ್ನು ಬಹಳ ಹೊತ್ತು ರಸ್ತೆಯ ಮೇಲೆ ನಿಲ್ಲಿಸಿಕೊಂಡು ಇರಬೇಕಾಯಿತು. ನನ್ನ ಕಾರಿನ ಮುಂದೆ ಜಾತ್ರೆಗೆ ಹೊರಟಿದ್ದ ಒಂದು ಪಿಕಪ್‌ವ್ಯಾನು ನಿಂತಿತ್ತು. ಅದರೊಳಗೆ ಜಾತ್ರೆಗೆ ಒಯ್ಯಲೆಂದು ಕುರಿಗಳನ್ನು ತುಂಬಿದ್ದರು. ವ್ಯಾನನ್ನು ನೋಡುತ್ತಲೇ ಎಲ್ಲ ಜೀವಗಳನ್ನು ಸಮಾನವಾಗಿ ಪರಿಗಣಿಸಿ ಜನರನ್ನೂ ಕುರಿಗಳನ್ನೂ ಒಟ್ಟಿಗೆ ಸಾಗಿಸುತ್ತಿದ್ದ ನಮ್ಮೂರಿನ ಸಮಾಜವಾದಿ ಬಸ್ಸುಗಳು ನೆನಪಾದವು. ಪಿಕಪ್ ವ್ಯಾನಿನಲ್ಲಿದ್ದ ಕುರಿಗಳೆಲ್ಲವೂ ನನಗೆ ಬೆನ್ನುಕೊಟ್ಟು ನಿಂತಿದ್ದವು. ಒಂದು ಟಗರು ಮಾತ್ರ ನನ್ನನ್ನೇ ಕುತೂಹಲದಿಂದ ದಿಟ್ಟಿಸುತ್ತಿತ್ತು. ಹಬ್ಬಕ್ಕೆ ತಂದ ಕುರಿ ಕೊಂದಹರೆಂಬುದನರಿಯದೆ ತೋರಣಕ್ಕೆ ತಂದ ತಳಿರನ್ನು ಮೇಯುವುದನ್ನು ಶರಣರು ಕರುಣೆಯಿಂದ ಚಿತ್ರಿಸಿದ್ದಾರಷ್ಟೆ. ನನಗಾದರೂ ಟಗರು ಜಾತ್ರೆಯಲ್ಲಿ ಬಲಿಯಾಗುವ ಮುನ್ನ ಲೋಕವನ್ನು ಕಡೆಯ ನೋಟದಲ್ಲಿ ತುಂಬಿಕೊಳ್ಳುತ್ತ ಇರುವಂತೆ ಭಾಸವಾಯಿತು.

ಅದರ ಕಣ್ಣಲ್ಲಿ ಕಣ್ಣಿಟ್ಟು ಭಾವನೆಯನ್ನು ಓದಲೆತ್ನಿಸಿದೆ. ಅಚ್ಚರಿಯಾಯಿತು. ಅದರ ಕಣ್ಣಲ್ಲಿ ಮರಣ ಭಯವಿರಲಿಲ್ಲ. ಬದಲಿಗೆ ನನ್ನ ಬಗ್ಗೆ 'ಪಾಪದವನು, ಕಾರೊಳಗೆ ಒಬ್ಬನೇ ಇದ್ದಾನೆ. ಎಲ್ಲಿ ಹೋಗಬೇಕಿತ್ತೊ ಏನೋ. ಟ್ರಾಫಿಕ್ಕಿನಲ್ಲಿ ಸಿಕ್ಕಿಕೊಂಡು ನರಳುತ್ತಿದ್ದಾನೆ' ಎಂಬ ಮರುಕಭಾವವಿತ್ತು. ಅದರೊಳಗಿನ ಅಣಕುಭಾವವು ಚೂರಿಯಂತೆ ಇರಿಯಿತು. ಅದರ ಕಣ್ತಪ್ಪಿಸಿ ನೋಟವನ್ನು ತುಸು ಕೆಳಗಿಳಿಸಿ ವ್ಯಾನಿನ ಬೆನ್ನನ್ನು ಗಮನಿಸಿದೆ. ಅಲ್ಲೊಂದು ಬರಹವಿತ್ತು: 'ತಿಳಿಬ್ಯಾಡ ಕುರಿಕಾಯೊ ಹುಡುಗನ ಹಗರ, ಮಂದೆಯೊಳಗಿದ್ದರೆ ಅಂವ ಬೀಜದ ಟಗರ'. ಟಗರು ನನ್ನತ್ತ ನಿಷ್ಠುರ ಮರುಕದಿಂದ ನೋಡಲು ಈ ಬೀಜವಾಕ್ಯವೇ ಕಾರಣವಿರಬೇಕು ಅಥವಾ 'ಕೊಂದವರುಳಿದರೇ ಕೂಡಲ ಸಂಗಮದೇವಾ?' ಎಂದು ನನ್ನನ್ನು ಛೇಡಿಸುತ್ತಿರಬೇಕು. ಚಿಂತನೆಗೆ ಬಿದ್ದೆ.

ನನಗೆ ಗೋಡೆ ಬೋರ್ಡು ವಾಹನಗಳ ಮೇಲೆ ಸೃಷ್ಟಿಯಾಗಿರುವ ಬೀದಿಸಾಹಿತ್ಯ ಓದುವ ದುರಭ್ಯಾಸ ಬಾಲ್ಯದಿಂದಲೂ ಬಂದಿದೆ. ಕಾಲುಬಂದ ಮಗು ಎಲ್ಲೆಂದರಲ್ಲಿ ನಡೆವಂತೆ, ಅಕ್ಷರ ಕಲಿತ ಬಳಿಕ ಅಂಗಡಿಬೋರ್ಡುಗಳ ಬರಹ ಓದಲಾರಂಭಿಸಿದೆ. ಅಪ್ಪ ನನ್ನ ಶಿಕ್ಷಣದ ಮಟ್ಟ ಅಳೆಯಲು ಬಸ್ಸಿನ ಬೋರ್ಡನ್ನು ತೋರಿಸಿ ಓದುವಂತೆ ಹೇಳುತ್ತಿದ್ದ. ಒಮ್ಮೆ ನಮ್ಮ ಕುಲುಮೆಯ ಮುಂದೆ ನಿಂತಿದ್ದ ಲಾರಿಯ ಮೇಲಿರುವ ಬರಹ ಓದಲು ಹೇಳಿದ. 'ವಿಶಾಲ ಮೈಸೂರು ರಾಜ್ಯದ ರಹದಾರಿ ಪಡೆದಿದೆ' ಎಂದೆ. ಅವನ ಮುಖ ಕಮಲದಂತೆ ಅರಳಿತು. ಮಗ ಜ್ಞಾನಸಾಗರವನ್ನೂ ಈಜಿ ಪಾರಂಗತನಾದನೆಂದು ನಾಲ್ಕಾಣೆ ಬಹುಮಾನವಿತ್ತನು. ಬಸ್ಸಿನ ಬೋರ್ಡನ್ನು ಓದಲು ಸಾಧ್ಯವಾದರೆ ಜಗತ್ತಿನ ಎಲ್ಲಿಯಾದರೂ ಬದುಕಬಹುದು ಎಂಬುದು ಅವನ ನಂಬಿಕೆ. ಬಹುಮಾನ ಗಿಟ್ಟಿಸಿದ ಬಳಿಕ, ಅಂಗಡಿ ಬೋರ್ಡು, ಭಿತ್ತಿ ಬರಹ, ಲಗ್ನಪತ್ರಿಕೆ, ಸಿನಿಮಾ ಪೋಸ್ಟರು - ಎಲ್ಲವನ್ನು ಗಟ್ಟಿಯಾಗಿ ಓದುವ ವ್ಯಸನಕ್ಕೆ ಒಳಗಾದೆ.

ಇದಕ್ಕೆ ತಕ್ಕಂತೆ ಸರ್ವಾಂತರ್ಯಾಮಿ ಸರ್ವಗುಣ ಸಂಪನ್ನ ಬೀದಿಸಾಹಿತ್ಯವು ನಮ್ಮೂರ ಪೇಟೆ ಬೀದಿಯಲ್ಲಿತ್ತು. ಈ ಸಾಹಿತ್ಯವು ದೃಷ್ಟಿಕೋನವನ್ನು ಮಾತ್ರವಲ್ಲ, ಬದುಕಿನ ಕ್ರಮವನ್ನೂ ಬದಲಿಸಬಲ್ಲ ಋಷಿವಾಣಿ ಅನಿಸಿದೆ. ಭಾಷೆಯಲ್ಲಿ ಹುಟ್ಟಿದ್ದೆಲ್ಲ ಸಾಹಿತ್ಯ ಎಂಬ ಉದಾರ ದೃಷ್ಟಿಯಿಂದ ನೋಡಿದರೆ, ಕಥೆ ಕಾವ್ಯ ಕಾದಂಬರಿಗಳು ಮಾತ್ರವಲ್ಲ; ಲೋಕದ ನಿಕೃಷ್ಟಕ್ಕೆ ಒಳಗಾದ ತಬ್ಬಲಿಗಳಂತಿರುವ ವಾಹನಸಾಹಿತ್ಯ, ಲಗ್ನಪತ್ರಿಕೆ ಸಾಹಿತ್ಯ, ಗೋಡೆಸಾಹಿತ್ಯ, ಜಾಹೀರಾತು ಸಾಹಿತ್ಯ, ಮೈಲಿಗಲ್ಲು ಸಾಹಿತ್ಯ, ಟಿಕೇಟು ಸಾಹಿತ್ಯ, ಕರಪತ್ರ ಸಾಹಿತ್ಯ, ಪೋಸ್ಟರ್ ಸಾಹಿತ್ಯ, ಬೋರ್ಡು ಸಾಹಿತ್ಯ, ಫ್ಲೆಕ್ಸ್ ಸಾಹಿತ್ಯ, ಡೆಸ್ಕು ಸಾಹಿತ್ಯ, ಶೌಚಾಲಯ ಸಾಹಿತ್ಯ ಮೊದಲಾಗಿ ಅನಂತ ಪ್ರಕಾರಗಳು ಗೋಚರಿಸುತ್ತವೆ. ಇಲ್ಲಿ ಶ್ರೇಷ್ಠ ಕಲಾಕೃತಿಗಳು ಇರಲಿಕ್ಕಿಲ್ಲ; ಆದರೆ ಅದನ್ನು ಬರೆದವರೂ ಲೇಖಕರು. ಅಲ್ಲಿರುವ ಕೆಲವು ಚಿಂತನೆಯ ಮಾತನ್ನು ಓದುವಾಗ 'ಹೌದಲ್ಲ, ಈ ಆಲೋಚನೆ ನನ್ನೊಳಗೂ ಇತ್ತು. ಯಾರೋ ಧೀರರು ಅದನ್ನು ಪ್ರಕಟಿಸುವ ಸಾಹಸ ಮಾಡಿದ್ದಾರೆ' ಅನಿಸುವುದುಂಟು. ಎಂದೂ ಪುಸ್ತಕರೂಪಕ್ಕೆ ಬಾರದ ಈ ಬೀದಿಬದಿಯ ಸಾಹಿತ್ಯವು ಬೀದಿನಾಟಕ, ಬೀದಿಗಾಯನ ಬೀದಿಭಾಷಣಗಳಷ್ಟೇ ಮುಖ್ಯವಾದುದು. ಇದನ್ನು